## ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** ಕೊಡಗು ಜಿಲ್ಲೆ, ಮಡಿಕೇರಿ ಜಿಲ್ಲಾ ಕೇಂದ್ರದಲ್ಲಿ ನಿರ್ಮಾಣವಾಗಿರುವ ಅಲ್ಪಸಂಖ್ಯಾತರ ಕಛೇರಿಗಳ ಸಂಕೀರ್ಣ ಹೆಚ್ಚುವರಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 124 ಎಂಡಿಎಸ್ 2016, ದಿ:16.04.2016.
2. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 124 ಎಂಡಿಎಸ್ 2016, ದಿ: 21.11.2016.
3. ಈ ಕಛೇರಿ ಆದೇಶ ಸಂಖ್ಯೆ: ಅಸಂನಿ/ಮಾ.ಕೇ/ಸಿಆರ್-122/2013-14 ದಿನಾಂಕ: 24.01.2015
4. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ ರವರ ಪತ್ರ ಸಂಖ್ಯೆ: ಬಿಸಿಎಂ-2/ಅ.ಮೌ.ಅ.ಭ ಕಟ್ಟಡ/ಸಿಆರ್-/2016-17 ದಿನಾಂಕ: 30.07.2016.
5. ಈ ಕಛೇರಿ ಆದೇಶ ಸಂಖ್ಯೆ: ಅಸಂನಿ/ಮಾ.ಕೇ/ಸಿಆರ್-122/2013-14 ದಿನಾಂಕ: 04.08.2016.
6. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 438 ಎಂಡಿಎಸ್ 2016 ದಿನಾಂಕ: 29.12.2016.

>>>()<<<

**ಪ್ರಸ್ತಾವನೆ:-**

ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ 2015-16ನೇ ಸಾಲಿನಲ್ಲಿ ಚಾಲ್ತಿಯಿದ್ದ ಯೋಜನಾ ಕಾರ್ಯಕ್ರಮಗಳನ್ನು 2016-17ನೇ ಸಾಲಿನವರೆಗೆ ಮುಂದುವರೆಸಿ ಆದೇಶ ಹೊರಡಿಸಲಾಗಿದೆ. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಒದಗಿಸಲಾದ ಆಯವ್ಯಯದಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲಾಗಿದೆ.

ಉಲ್ಲೇಖ(3)ರ ಈ ಕಛೇರಿ ಆದೇಶದಲ್ಲಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ ರವರು ಅಲ್ಪಸಂಖ್ಯಾತರ ಕಛೇರಿಗಳ ಸಂಕೀರ್ಣ ನಿರ್ಮಾಣ ಕಾಮಗಾರಿಯ ಅಂದಾಜುಪಟ್ಟಿ ರೂ. 100 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 100 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಉಲ್ಲೇಖ (4)ರಲ್ಲಿ ದಿನಾಂಕ: 30.07.2016 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರು ಸ್ಥಳ ಪರಿಶೀಲನೆ ನಡೆಸಿ ಸಾರ್ವಜನಿಕರಿಗೆ ರಸ್ತೆಯ ಅನಾನುಕೂಲ ಇರುವುದರಿಂದ ಸದರಿ ಕಟ್ಟಡಕ್ಕೆ ಆವರಣಗೋಡೆ, ಕಾಂಕ್ರೀಟ್ ರಸ್ತೆ, ಚರಂಡಿ ಮತ್ತು ಇಂಟರ್‌ಲಾಕ್ ಅಳವಡಿಸುವಂತೆ ಸೂಚನೆ ನೀಡಿರುತ್ತಾರೆ. ಅದರಂತೆ ಯೋಜನಾ ವ್ಯವಸ್ಥಾಪಕರು, ಕೊಡಗು ನಿರ್ಮಿತಿ ಕೇಂದ್ರ, ಮಡಿಕೇರಿ ರವರು ಸದರಿ ಹೆಚ್ಚುವರಿ ಕಾಮಗಾರಿಗಳಾದ ಆವರಣಗೋಡೆ, ಕಾಂಕ್ರೀಟ್ ರಸ್ತೆ, ಚರಂಡಿ ಮತ್ತು ಇಂಟರ್‌ಲಾಕ್ ಅಳವಡಿಕೆ ಬಾಬ್ತು ರೂ. 24.62 ಲಕ್ಷಗಳಿಗೆ ಅಂದಾಜುಪಟ್ಟಿ ತಯಾರಿಸಿ ಕೂಡಲೇ ಅನುದಾನ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

ಉಲ್ಲೇಖ (5)ರ ಈ ಕಛೇರಿ ಆದೇಶದಲ್ಲಿ ಕೊಡಗು ಜಿಲ್ಲೆ, ಅಲ್ಪಸಂಖ್ಯಾತರ ಜಿಲ್ಲಾ ಕಛೇರಿಗಳ ಸಂಕೀರ್ಣ ಭವನ ನಿರ್ಮಾಣ ಹಂತದಲ್ಲಿದ್ದು, ಸಾರ್ವಜನಿಕರಿಗೆ ರಸ್ತೆಯ ಅನಾನುಕೂಲ ಇರುವುದರಿಂದ ಸದರಿ ಕಟ್ಟಡಕ್ಕೆ ಆವರಣಗೋಡೆ, ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಹೆಚ್ಚುವರಿಯಾಗಿ ರೂ. 5.00 ಲಕ್ಷ (ರೂ. ಐದು ಲಕ್ಷಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿದೆ.

ಉಲ್ಲೇಖ (6)ರ ಸರ್ಕಾರದ ಆದೇಶದಲ್ಲಿ ಮಾನ್ಯ ಮುಖ್ಯಮಂತ್ರಿ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4225-03-277-2-10 (386)ರಡಿ ಒದಗಿಸಲಾಗಿರುವ ರೂ. 100 ಕೋಟಿಗಳ ಅನುದಾನದಲ್ಲಿ ಕ್ರ.ಸಂ (1) ರಿಂದ (9)ರ ವರೆಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿರುವ ಅನುದಾನವನ್ನು ಮೀಸಲಿರಿಸಿ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದೆ. ಸದರಿ ಕ್ರಿಯಾ ಯೋಜನೆಯ ಕ್ರ.ಸಂ (2)ರಲ್ಲಿ ಮೌಲಾನಾ ಅಜಾದ್ ಭವನ್ ಕಟ್ಟಡ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ರೂ. 486.45 ಲಕ್ಷ ಬಿಡುಗಡೆ ಮಾಡಲು ಆದೇಶಿಸಲಾಗಿದೆ. ಸದರಿ ಅನುದಾನದಲ್ಲಿ ಕೊಡಗು ಜಿಲ್ಲೆಗೆ ಚರಂಡಿ ನಿರ್ಮಾಣ ಮತ್ತು ಇಂಟರ್‌ಲಾಕ್ ಕಾಮಗಾರಿಗೆ ರೂ. 19.62 ಲಕ್ಷ (ರೂ. ಹತ್ತೊಂಭತ್ತು ಲಕ್ಷದ ಅರವತ್ತೇರಡು ಸಾವಿರಗಳು ಮಾತ್ರ)ಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಥೇರ್ಮನ್ ನಿರ್ಮಿತಿ ಕೇಂದ್ರ ಮತ್ತು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರಿಗೆ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

## ಆದೇಶ

**ಸಂಖ್ಯೆ: ಅಸಂನಿ/ಮಾ.ಕೇ/ಸಿಆರ್-122/2013-14** **ದಿನಾಂಕ: 12.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ ಉಲ್ಲೇಖ (6)ರ ಸರ್ಕಾರದ ಆದೇಶದಲ್ಲಿ ಮಾನ್ಯ ಮುಖ್ಯಮಂತ್ರಿ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 4225-03-277-2-10 (386)ರಡಿ ಒದಗಿಸಲಾಗಿರುವ ರೂ. 100 ಕೋಟಿಗಳ ಅನುದಾನದಲ್ಲಿ ಕ್ರ.ಸಂ (1) ರಿಂದ (9)ರ ವರೆಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿರುವ ಅನುದಾನವನ್ನು ಮೀಸಲಿರಿಸಿ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದೆ. ಸದರಿ ಕ್ರಿಯಾ ಯೋಜನೆಯ ಕ್ರ.ಸಂ (2)ರಲ್ಲಿ ಮೌಲಾನಾ ಅಜಾದ್ ಭವನ್ ಕಟ್ಟಡ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ರೂ. 486.45 ಲಕ್ಷ ಬಿಡುಗಡೆ ಮಾಡಲು ಆದೇಶಿಸಲಾಗಿದೆ. ಸದರಿ ಅನುದಾನದಲ್ಲಿ ಕೊಡಗು ಜಿಲ್ಲೆಗೆ ಚರಂಡಿ ನಿರ್ಮಾಣ ಮತ್ತು ಇಂಟರ್‌ಲಾಕ್ ಕಾಮಗಾರಿಗೆ ರೂ. 19.62 ಲಕ್ಷ (ರೂ. ಹತ್ತೊಂಭತ್ತು ಲಕ್ಷದ ಅರವತ್ತೇರಡು ಸಾವಿರಗಳು ಮಾತ್ರ)ಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಥೇರ್ಮನ್ ನಿರ್ಮಿತಿ ಕೇಂದ್ರ ಮತ್ತು ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಪಾವತಿಸಲು ಆದೇಶಿಸಿದೆ ಹಾಗೂ ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:-**

1) ಕೊಡಗು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಜಿಲ್ಲಾ ಕಛೇರಿಗಳ ಸಂಕೀರ್ಣ ಭವನ ನಿರ್ಮಾಣ ಹಂತದಲ್ಲಿದ್ದು, ಚರಂಡಿ ನಿರ್ಮಾಣ ಮತ್ತು ಇಂಟರ್‌ಲಾಕ್ ಕಾಮಗಾರಿಗೆ ಹೆಚ್ಚುವರಿ ರೂ. 19.62 ಲಕ್ಷಗಳಿಗೆ ಸಂಬಂಧಿಸಿರುತ್ತದೆ.
2) ಒಂದು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಅಲ್ಪಸಂಖ್ಯಾತರ ಇಲಾಖೆಯ ವಶಕ್ಕೆ ನೀಡುವುದು.
3) ಬಿಡುಗಡೆಯಾದ ಅನುದಾನಕ್ಕೆ ಕಾಮಗಾರಿಯ ಪ್ರಗತಿ ವರದಿ ಮತ್ತು ಹಣಬಳಕೆ ಪ್ರಮಾಣ ಪತ್ರ ಹಾಗೂ ಕಟ್ಟಡದ ಛಾಯಾಚಿತ್ರವನ್ನು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
4) ಕಾಮಗಾರಿ ಮುಗಿದ ನಂತರ ಗುಣಮಟ್ಟವನ್ನು 3ನೇ ಪಾರ್ಟಿಯಿಂದ ತಪಾಸಣೆ ನಡೆಸಿ ವರದಿ ನೀಡುವುದು.